ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ
ಸ್ಪೇಷಲ್ (ಲೋಕಾ) 06/2014

| | | |
|---|---|---|
| ಸಾಕ್ಷಿದಾರರ ಹೆಸರು | : ಡಿ. ಕೃಷ್ಣಮೂರ್ತಿ | ಪಿ.ಡಬ್ಲ್ಯೂ 2 |
| ತಂದೆ ಹೆಸರು | : ಲೇಟ್ ದುರುಗಪ್ಪ | ಸಿ.ಡಬ್ಲ್ಯೂ 2 |
| ವಯಸ್ಸು | : 56 ವರ್ಷ | |
| ವೃತ್ತಿ | : ಬೆರಳಚ್ಚುಗಾರರು, ಬೆಸ್ಕಾಂ ಇಲಾಖೆ, ದಾವಣಗೆರೆ | |
| ವಾಸಸ್ಥಳ | : ದಾವಣಗೆರೆ. | |

ಪ್ರಮಾಣ ಮಾಡಿದ ದಿಃ 22-09–2018.
ಮುಖ್ಯ ವಿಚಾರಣೆ : ವಿಶೇಷ ಅಭಿಯೋಜಕರಿಂದ

1) 1991ರಿಂದ ಇಲ್ಲಿಯವರೆಗೆ ನಾನು ಬೆಸ್ಕಾಂ ಇಲಾಖೆ ದಾವಣಗೆರೆಯಲ್ಲಿ ಬೆರಳಚ್ಚುಗಾರ ಅಂತಾ ಕೆಲಸ ಮಾಡುತ್ತಿದ್ದೇನೆ. ದಿ.30.07.2013ರಂದು ನಾನು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನನ್ನು ಮತ್ತು ಜಯಪ್ರಕಾಶ್ ಅವರನ್ನು ನನ್ನ ಮೇಲಾಧಿಕಾರಿಗಳು ಕರೆಸಿದರು. ಲೋಕಾಯುಕ್ತ ಕಛೇರಿಯವರು ನಮ್ಮನ್ನು ಕರೆ ಕಳುಹಿಸಿದ್ದರಿಂದ ನಾವು ಲೋಕಾಯುಕ್ತ ಕಛೇರಿಗೆ ಹೋದೆವು. ನಾವು ಕಛೇರಿಗೆ ಹೋದಾಗ ಮಧ್ಯಾಹ್ನ 12 ಗಂಟೆಯಾಗಿತ್ತು, ನಾವು ಲೋಕಾಯುಕ್ತ ಅಧಿಕಾರಿ ಒಡೆಯರ್ ಇವರನ್ನು ಭೇಟಿಯಾದೆವು. ಸದರಿ ಅಧಿಕಾರಿಯವರು ನಮ್ಮನ್ನು ಶ್ರೀರಾಮಚಂದ್ರ ಮತ್ತು ವೆಂಕಟೇಶರಾವ್ ರವರನ್ನು ಪರಿಚಯ ಮಾಡಿಕೊಟ್ಟರು. ಮತ್ತು ಸದರಿಯವರು ದೂರಿನ ಸತ್ಯಾಂಶವನ್ನು ಹೇಳಿದರು. ಲೋಕಾಯುಕ್ತ ಅಧಿಕಾರಿಗಳು ನಾಗೇಶ್ವರರಾವ್ ಇವರಿಗೆ ನೋಟುಗಳನ್ನು ಹಾಜರು ಮಾಡಲು ಹೇಳಿದರು. ಮತ್ತು ನೋಟಿನ ಸಂಖ್ಯೆಗಳನ್ನು ನಮಗೆ ಬರೆದುಕೊಳ್ಳಲು ಹೇಳಿದರು. ಆ ರೀತಿ ನಾವು ನೋಟಿನ ಸಂಖ್ಯೆಗಳನ್ನು ಬಿಳಿ ಹಾಳೆಯಲ್ಲಿ ಬರೆದು ಸಹಿ ಮಾಡಿರುತ್ತೇವೆ. ನಾವು ಎಣಿಸಿದ ಎರಡು ನೋಟುಗಳು ಐದು ನೂರು ಮುಖ ಬೆಲೆಯವು ಇದ್ದವು. ನಂತರ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಯವರಿಗೆ ಕರೆದು ಮೇಲೆ ಹೇಳಿದ ಎರಡು ನೋಟುಗಳಿಗೆ ಫಿನಾಪ್ತಲೀನ್ ಹಚ್ಚಲು ಹೇಳಿದರು. ತನಿಖಾಧಿಕಾರಿಗಳ ಟೇಬಲ್ಲಿನ ಮೇಲೆ ಒಂದು ಗಾಜಿನ ಬಟ್ಟಲು ಇತ್ತು, ನಂತರ ಮೇಲೆ ಹೇಳಿದ ಹಣವನ್ನು ಬಾಬಣ್ಣ ಅನ್ನುವವರ ಜೇಬಿನಲ್ಲಿ ಎಂ.ಆರ್. ಜಯಪ್ರಕಾಶ ಅವರು ಹಣವನ್ನು ಇಟ್ಟರು. ನಂತರ ಲೋಕಾಯುಕ್ತ ಸಿಬ್ಬಂದಿಯವರು ಬಟ್ಟಲಿನಲ್ಲಿ ಒಂದು ರಾಸಾಯನಿಕ ದ್ರಾವಣವನ್ನು ಹಾಕಿರುತ್ತಾರೆ. ಮತ್ತು ಸದರಿ ಸ್ವಲ್ಪ ದ್ರಾವಣವನ್ನು ಇನ್ನೊಂದು

ಬಾಟಲಿಯಲ್ಲಿ ಅಂದರೆ ಸ್ಯಾಂಪಲ್ಲು ಹಾಕಿ ಅದನ್ನು ಸೀಲು ಮಾಡಿದರು. ನಂತರ ಪೌಡರ್ ಹಚ್ಚಿ ಹಣ ಎಣಿಸಿದ ಜಯಪ್ರಕಾಶ ಇವರ ಎರಡೂ ಕೈಗಳನ್ನು ಆ ದ್ರಾವಣದ ಬಟ್ಟಲಿನಲ್ಲಿ ಅದ್ದಿಸಿದರು. ಸದರಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಇರುತ್ತದೆ. ಸದರಿ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಇನ್ನೊಂದು ಬಾಟಲಿಯಲ್ಲಿ ಹಾಕಿ ಸೀಲು ಮಾಡಿದರು. ಮತ್ತು ಲೋಕಾಯುಕ್ತ ಅಧಿಕಾರಿಗಳು ನಮಗೆ ಸದರಿ ಹಣವನ್ನು ಕೇಳಿದ ವ್ಯಕ್ತಿಗೆ ಮಾತ್ರ ಕೊಡಬೇಕು ಮತ್ತು ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸಬೇಕು ಅಂತಾ ಹೇಳಿದರು. ನಂತರ ತನಿಖಾಧಿಕಾರಿಗಳು ನನಗೆ ನೀವು ಪಿರ್ಯಾದಿದಾರರ ಜೊತೆ ಹೋಗಬೇಕು ಮತ್ತು ಅವರಿಗೆ ಸಹಕರಿಸಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ನೋಡಬೇಕು ಅಂತಾ ಹೇಳಿದರು. ಲೋಕಾಯುಕ್ತ ಕಛೇರಿಯಲ್ಲಿ ನಡೆದ ಮೇಲೆ ಹೇಳಿದ ಎಲ್ಲ ಘಟನೆಗಳನ್ನು ವೀಡಿಯೋ ಮಾಡಿಕೊಂಡು ಮತ್ತು ಸದರಿ ರಿಕಾರ್ಡ ಮಾಡಿದ್ದನ್ನು ಸಿ.ಡಿ. ಮಾಡಿ, ಪಂಚ ಚೀಟಿ ಹಚ್ಚಿ, ಅದರ ಮೇಲೆ ನಮ್ಮ ಸಹಿ ಪಡೆದಿದ್ದಾರೆ. ಮತ್ತು ತನಿಖಾಧಿಕಾರಿಗಳು ಮೇಲೆ ಹೇಳಿದ ಎಲ್ಲ ವಿಷಯಗಳನ್ನು ಯಾರಿಗೂ ತಿಳಿಸದೆ ಗೌಪ್ಯವಾಗಿ ಇಡಬೇಕು ಅಂತಾ ಹೇಳಿದರು. ಇದೆಲ್ಲಾ ಮುಗಿದ ಮೇಲೆ ನಾವು ಮತ್ತು ಇತರರು ಎಲ್ಲರೂ ನಮ್ಮ ಕೈಗಳನ್ನು ಸೋಪು ಹಚ್ಚಿ ತೊಳೆದುಕೊಂಡೆವು. ಮತ್ತು ಈ ಬಗ್ಗೆ ನಮ್ಮ ಹೇಳಿಕೆಗಳನ್ನು ಪಡೆದರು. ಮತ್ತು ಮಹಜರು ಸಹ ಮಾಡಿದರು. ಈಗ ನಾನು ಸದರಿ ಮಹಜರನ್ನು ನೋಡುತ್ತಿದ್ದು, ಸದರಿ ಮಹಜರಿನ ಪ್ರತಿ ಪುಟಕ್ಕೂ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.2 ಅಂತಾ ಈಗಾಗಲೇ ಗುರ್ತಿಸಿದ್ದು, ಮತ್ತು ಅದರ ಮೇಲಿರುವ ನನ್ನ ಸಹಿ ನಿ.ಪಿ.2(ಬಿ) ಇರುತ್ತದೆ. ಮೇಲೆ ಹೇಳಿದ ಎಲ್ಲ ಘಟನೆಗಳು ಮಧ್ಯಾಹ್ನ 2.10ರಿಂದ ಸು.3.30ರ ವರೆಗೆ ನಡೆದಿದ್ದು ಇದೆ.

2) ನಂತರ ಲೋಕಾಯುಕ್ತರ ವಾಹನದಲ್ಲಿ ಲೋಕಾಯುಕ್ತ ಇನ್‌ಸ್ಪೆಕ್ಟರ್, ಲೋಕಾಯುಕ್ತ ಸಿಬ್ಬಂದಿಯವರು ಎಲ್ಲರೂ ಕೂಡಿಕೊಂಡು ಹಳೆಯ ಜಿಲ್ಲಾಧಿಕಾರಿಗಳ ಅವರ ಕಛೇರಿಯ ಕಡೆಗೆ ಹೋದೆವು. ಮತ್ತು ಲೋಕಾಯುಕ್ತ ತನಿಖಾಧಿಕಾರಿಗಳು ಪಿರ್ಯಾದಿದಾರರ ತಮ್ಮನ ಮಗ ಬಾಬಣ್ಣ ಇವರಿಗೆ ಬಟನ್ ಕ್ಯಾಮೆರಾ ಅಳವಡಿಸಿ, ಆನ್ ಮಾಡಲು ಹೇಳಿದರು. ನಂತರ ತನಿಖಾಧಿಕಾರಿಗಳ ಆದೇಶದ ಮೇರೆಗೆ ನಾನು ಬಾಬಣ್ಣ ಮತ್ತು ಲೋಕಾಯುಕ್ತ ಸಿಬ್ಬಂದಿ ಎಲ್ಲರೂ ತಾಲ್ಲೂಕು ಕಛೇರಿಯ ಭೂ ಮಾಪನ ಕಛೇರಿಯ ಕಡೆಗೆ ಹೋದೆವು. ಮೊದಲು ಬಾಬಣ್ಣ ಭೂಮಾಪನ ಕಛೇರಿಯ ಒಳಗಡೆ

ಹೋದ. ಮತ್ತು ಸದರಿ ಬಾಬಣ್ಣ ಮೊದಲು ಆರೋಪಿಯೊಂದಿಗೆ ಮಾತನಾಡಿದ. ಆಗ ಆರೋಪಿ ಬಾಬಣ್ಣನಿಗೆ ನಿಮ್ಮ ದೊಡ್ಡಪ್ಪ ಹಣ ಕಳುಹಿಸಿದ್ದಾರೆಯೇ ಅಂತಾ ಕೇಳಿದರು. ಅದಕ್ಕೆ ಬಾಬಣ್ಣ ಹೂಂ ಅಂತಾ ಹೇಳಿದ. ನಂತರ ಬಾಬಣ್ಣ ತನ್ನ ಜೇಬಿನಿಂದ ಹಣ ತೆಗೆದು ಆರೋಪಿಯ ಕೈಯಲ್ಲಿ ಒಂದು ಸಾವಿರ ಹಣ ಕೊಟ್ಟಿದ್ದಾರೆ. ಆರೋಪಿತನು ತನ್ನ ಬಲಗೈಯಿಂದ ಹಣ ತೆಗೆದುಕೊಂಡು ತಾನು ಕೂಡುವ ಬಲಗಡೆಯ ಅಲಮಾರಿನಲ್ಲಿ ಹಣ ಇಟ್ಟ. ನಂತರ ಆರೋಪಿ ಅಲಮಾರಿಯಲ್ಲಿದ್ದ ಎರಡು ದಾಖಲೆಗಳನ್ನು ಬಾಬಣ್ಣನ ಕೈಗೆ ಕೊಟ್ಟಿದ್ದಾನೆ. ನಾನು ಸಹ ಅಲ್ಲಿಯೇ ಇದ್ದೆ. ಎಲ್ಲ ವಿದ್ಯಮಾನಗಳನ್ನು ಗಮನಿಸಿ, ನಂತರ ಬಾಬಣ್ಣ ದಾಖಲೆಗಳನ್ನು ಪಡೆದು ಹೊರಗೆ ಬಂದು ತನ್ನ ಕರವಸ್ತ್ರದಿಂದ ಮುಖ ಒರೆಸಿಕೊಂಡು ಲೋಕಾಯುಕ್ತ ಇನ್‌ಸ್ಪೆಕ್ಟರ್ ಮತ್ತು ಸಿಬ್ಬಂದಿಯವರಿಗೆ ಸೂಚನೆ ಕೊಟ್ಟ. ಲೋಕಾಯುಕ್ತ ಇನ್‌ಸ್ಪೆಕ್ಟರ್ ಕೂಡಲೇ ಧಾವಿಸಿ ತಾನು ಆರೋಪಿಗೆ ಹಣ ಕೊಟ್ಟಿದ್ದೇನೆ ಅಂತಾ ತಿಳಿಸಿದ್ದಾನೆ. ತಾನು ಲೋಕಾಯುಕ್ತ ಇನ್‌ಸ್ಪೆಕ್ಟರ್ ತಮ್ಮ ಸಿಬ್ಬಂದಿಯ ಮೂಲಕ ಆರೋಪಿಯ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ನಂತರ ಲೋಕಾಯುಕ್ತ ಇನ್‌ಸ್ಪೆಕ್ಟರ್‌ರವರು ತಮ್ಮ ಐಡಿ ಕಾರ್ಡನ್ನು ಆರೋಪಿಗೆ ತೋರಿಸುತ್ತಾರೆ. ನಂತರ ಲೋಕಾಯುಕ್ತ ಇನ್‌ಸ್ಪೆಕ್ಟರು ಆರೋಪಿಗೆ ತಮ್ಮ ಪರಿಚಯ ಮಾಡಿ, ನಂತರ ನಮ್ಮ ಹಾಗೂ ತಮ್ಮ ಸಿಬ್ಬಂದಿಯವರ ಪರಿಚಯ ಮಾಡಿಕೊಟ್ಟರು. ಆಗ ಇನ್‌ಸ್ಪೆಕ್ಟರ್‌ರವರು ಆರೋಪಿಗೆ ಬಾಬಣ್ಣ ಇವರ ಪರಿಚಯ ಇದೆ ಅಂತಾ ಕೇಳಿದಾಗ ಆಗ ಆರೋಪಿ ತನಗೆ ಪರಿಚಯ ಇದೆ ಅಂತಾ ಹೇಳುತ್ತಾನೆ. ಮತ್ತು ಇನ್‌ಸ್ಪೆಕ್ಟರ್‌ರವರು ಆರೋಪಿಯನ್ನು ದಸ್ತಗಿರಿ ಮಾಡಲಾಗಿದೆ ಅಂತಾ ತಿಳಿಸಿರುತ್ತಾರೆ. ನಂತರ ಇನ್‌ಸ್ಪೆಕ್ಟರ್ ರವರು ನನಗೂ ಮತ್ತು ಬಾಬಣ್ಣ ಇವರಿಗೆ ಹೇಳಿದರು. ನಂತರ ನಮ್ಮ ಹೇಳಿಕೆಗಳನ್ನು ಇನ್‌ಸ್ಪೆಕ್ಟರ್ ಪಡೆದಿರುತ್ತಾರೆ. ಆಗ ಇನ್‌ಸ್ಪೆಕ್ಟರ್‌ರವರು ಆರೋಪಿಗೆ ನೀನು ಪಡೆದ ಲಂಚದ ಹಣವನ್ನು ಎಲ್ಲಿ ಇಟ್ಟಿದ್ದೀಯಾ ಅಂತಾ ವಿಚಾರಿಸಿರುತ್ತಾರೆ. ಆಗ ಆರೋಪಿ ತಾನು ಲಂಚ ಪಡೆದ ಹಣವನ್ನು ಅಲಮಾರಿನಲ್ಲಿ ಇಟ್ಟಿದ್ದೇನೆ ಅಂತಾ ಹೇಳುತ್ತಾನೆ. ನಂತರ ಇನ್‌ಸ್ಪೆಕ್ಟರ್ ನನಗೆ ಕರೆಸಿ ಆರೋಪಿ ಅಲಮಾರಿನಲ್ಲಿ ಇಟ್ಟ ಹಣವನ್ನು ತೆಗೆದುಕೊಂಡು ಬಾ ಅಂತಾ ಹೇಳುತ್ತಾರೆ. ನಾವು ಸದರಿ ಹಣವನ್ನು ತಂದು ನೋಡಲಾಗಿ, ನಾವು ಮೊದಲು ಮಹಜರು ಮಾಡುವಾಗ ಬರೆದ ನೋಟಿನ ನಂಬರುಗಳೇ ಮತ್ತು ಆರೋಪಿ ಪಡೆದ ನೋಟುಗಳ ನಂಬರುಗಳು ಒಂದಕ್ಕೊಂದು ಹೋಲಿರುತ್ತವೆ. ನಂತರ ಸದರಿ ಹಣವನ್ನು ಒಂದು

ಕವರ್‌ನಲ್ಲಿ ಹಾಕಿ ಸೀಲು ಮಾಡಿ, ಲೋಕಾಯುಕ್ತ ಇನ್‌ಸ್ಪೆಕ್ಟರ್ ಸೀಲಿಗೆ ಸಹಿ ಹಾಕಿರುತ್ತಾರೆ ಮತ್ತು ನಾವು ಕೂಡ ಸೀಲು ಹಾಕಿದ ಕವರ್ ಮೇಲೆ ಸಹಿ ಮಾಡಿರುತ್ತೇವೆ. ನಂತರ ಲೋಕಾಯುಕ್ತ ಪೋಲೀಸರು ಬಟ್ಟಲಿನಲ್ಲಿ ದ್ರಾವಣ ಹಾಕಿರುತ್ತಾರೆ. ಮತ್ತು ಸ್ವಲ್ಪ ದ್ರಾವಣವನ್ನು ಒಂದು ಸ್ಯಾಂಪಲ್ಲು ಬಾಟಲಿನಲ್ಲಿ ಹಾಕಿ ಸೀಲು ಮಾಡಿರುತ್ತಾರೆ, ಪಂಚಚೀಟಿಯ ಮೇಲೆ ನಮ್ಮ ಸಹಿ ಪಡೆದಿರುತ್ತಾರೆ. ಬಟ್ಟಲಲ್ಲಿ ಆರೋಪಿಯ ಬಲಕೈಯನ್ನು ಅದ್ದಿಸಿರುತ್ತಾರೆ. ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಇರುತ್ತದೆ. ಮತ್ತು ಇನ್ನೊಂದು ದ್ರಾವಣದಲ್ಲಿ ಆರೋಪಿಯ ಎಡಗೈಯನ್ನು ಹಾಕಿದಾಗ ಅದು ಯಾವುದೇ ಬಣ್ಣಕ್ಕೆ ತಿರುಗಲಿಲ್ಲ. ಮತ್ತು ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣ ಮತ್ತು ಒಣ ದ್ರಾವಣವನ್ನು ಪ್ರತ್ಯೇಕ ಬಾಟಲಿಗಳಲ್ಲಿ ಹಾಕಿ ಸೀಲು ಮಾಡಿರುತ್ತಾರೆ.

3) ಆರೋಪಿ ತಾನು ಲಂಚದ ಹಣ ಕೇಳಿ ಪಡೆದಿರುತ್ತೇನೆ ಅಂತಾ ಲೋಕಾಯುಕ್ತ ಪೋಲೀಸರ ಮುಂದೆ ಹೇಳಿಕೆ ಕೊಡುತ್ತಾನೆ. ಲೋಕಾಯುಕ್ತ ಪೋಲೀಸರು ಆರೋಪಿಯ ಹೇಳಿಕೆಯ ಬಗ್ಗೆ ನಮ್ಮನ್ನು ವಿಚಾರಣೆ ಮಾಡಿದಾಗ ಆರೋಪಿಯ ಹೇಳಿಕೆ ನಿಜವಿರುತ್ತದೆ ಅಂತಾ ನಾವು ಸಹ ಹೇಳಿರುತ್ತೇವೆ. ಸದರಿ ಆರೋಪಿಯು ಕೊಟ್ಟ ಹೇಳಿಕೆಯ ಮೇರೆಗೆ ಆರೋಪಿಯು ಸಹಿ ಮಾಡಿದ್ದು, ಮತ್ತು ಅದಕ್ಕೆ ನಾವು ಸಹ ಸಹಿ ಮಾಡಿದ್ದೇವೆ. ನಾನು ಈಗ ಆರೋಪಿ ಕೊಟ್ಟ ಹೇಳಿಕೆಯನ್ನು ನೋಡುತ್ತಿದ್ದು, ಅದು ಈಗಾಗಲೇ ನಿ.ಪಿ.7 ಅಂತಾ ಗುರ್ತಿಸಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.7(ಎ) ಗುರ್ತಿಸಲಾಯಿತು. ಪೋಲೀಸರು ಆರೋಪಿಗೆ ಪ್ರಕರಣದ ದಾಖಲೆಗಳನ್ನು ಕೊಡಿ ಅಂತಾ ಕೇಳಿದಾಗ ಆರೋಪಿ ತಾನು ಅವುಗಳನ್ನು ಬಾಬಣ್ಣನ ಕೈಗೆ ಕೊಟ್ಟಿರುತ್ತೇವೆ ಅಂತಾ ಹೇಳುತ್ತಾನೆ. ನಂತರ ಲೋಕಾಯುಕ್ತ ಪೋಲೀಸರು ಆರೋಪಿಯ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದರು. ಸದರಿ ಅಧಿಕಾರಿಗಳು ಬಾಬಣ್ಣನ ಕೈಗೆ ಕೊಟ್ಟ ದಾಖಲೆಗಳನ್ನು ಪಡೆದು, ಜೆರಾಕ್ಸ್ ಮಾಡಿಸಿ ದೃಢೀಕರಿಸಿ, ಮೂಲ ದಾಖಲೆಗಳನ್ನು ಬಾಬಣ್ಣನ ಕೈಗೆ ಕೊಡುತ್ತಾರೆ. ಆರೋಪಿಯ ಮೇಲಾಧಿಕಾರಿಗಳು ವೀಡಿಯೋ ನೋಡಿ ಮತ್ತು ವಾಯ್ಸ್ ರೆಕಾರ್ಡರ್‌ನ ಧ್ವನಿ ಕೇಳಿ, ಅದು ಆರೋಪಿಯ ಧ್ವನಿ ಇರುತ್ತದೆ ಅಂತಾ ದೃಢೀಕರಿಸುತ್ತಾರೆ. ಆರೋಪಿಯು ಗುತ್ತಿಗೆ ಆಧಾರದ ಮೇಲೆ ಅಲ್ಲಿ ಸರ್ವೆಯರ್ ಅಂತಾ ಕೆಲಸ ಮಾಡುತ್ತಾನೆ ಅಂತಾ ತಿಳಿಸುತ್ತಾರೆ. ನಂತರ ಲೋಕಾಯುಕ್ತ ಪೋಲೀಸರು ಆರೋಪಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ದಾಖಲೆಗಳನ್ನು ಮತ್ತು ಆರೋಪಿಯ ಹಾಜರಾತಿಯ ಪುಸ್ತಕವನ್ನು

ಪರಿಶೀಲಿಸುತ್ತಾರೆ. ಅವುಗಳನ್ನು ಸಹಿ ಮಾಡಿ, ಸದರಿ ದಾಖಲೆಗಳ ದೃಢೀಕೃತ ನಕಲುಗಳನ್ನು ಪಡೆಯುತ್ತಾರೆ. ಕಛೇರಿಯಲ್ಲಿ ನಡೆದ ಎಲ್ಲ ನಡವಳಿಕೆಯನ್ನು ಲೋಕಾಯುಕ್ತ ಪೋಲೀಸರು ವೀಡಿಯೋ ಮಾಡಿಕೊಳ್ಳುತ್ತಾರೆ ಮತ್ತು ಸಿ.ಡಿ. ಮಾಡಿ, ಅವೆಲ್ಲವುಗಳನ್ನು ಸೀಲು ಮಾಡುತ್ತಾರೆ. ನಾನು ಅವುಗಳ ಮೇಲೆ ಪಂಚ ಅಂತಾ ದೃಢೀಕರಿಸುತ್ತೇನೆ. ಮತ್ತು ಪೋಲೀಸರು ಘಟನೆ ನಡೆದ ಜಾಗೆಯ ಹಾಥ್ ನಕಾಶೆ ತಯಾರಿಸಿರುತ್ತಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ಈಗ ಹಾಥ್ ನಕಾಶೆ ನೋಡುತ್ತಿದ್ದು, ಅದು ಈಗಾಗಲೇ ನಿ.ಪಿ.6 ಅಂತಾ ಗುರ್ತಿಸಿದ್ದು, ನನ್ನ ಸಹಿಯನ್ನು ನಿ.ಪಿ.6(ಬಿ) ಅಂತಾ ಗುರ್ತಿಸಲಾಯಿತು. ಬೆರಳಚ್ಚು ಮಾಡಿದ ದಾಖಲೆಗಳಿಗೆ ನಾನು ಸಹಿ ಮಾಡಿದ್ದೇನೆ. ನಾನು ಈಗ ಟ್ರ್ಯಾಪ್ ದಾಖಲೆ ನಿ.ಪಿ.3 ನೋಡುತ್ತಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.3(ಬಿ) ಅಂತಾ ಗುರ್ತಿಸಲಾಯಿತು. ನಾನು ಎಲ್ಲ ದಾಖಲೆಗಳಲ್ಲಿ ಸಹಿ ಮಾಡಿರುತ್ತೇನೆ. ಅಂದರೆ ಅದು ನಿ.ಪಿ.4 ದಾಖಲೆ ಇರುತ್ತದೆ. ಸದರಿ ಲೋಕಾಯುಕ್ತ ಪೋಲೀಸರು ಎ.ಜೆ. ಅಂತಾ ಇಂಕಿನಿಂದ ದಾಖಲೆಗಳನ್ನು ಸೀಲು ಮಾಡಿರುತ್ತಾರೆ. ನಾನು ಈಗ ಮಾದರಿ ಸಹಿ ನೋಡುತ್ತಿದ್ದು, ಸದರಿ ಮಾದರಿ ಸಹಿಗಳು ಈಗಾಗಲೇ ನಿ.ಪಿ.5 ಅಂತಾ ಗುರ್ತಿಸಲಾಗಿದೆ. ನಾನು ಈಗ ದಾಖಲೆ ಸಂಖ್ಯೆ 8 ಪುಟ ಸಂಖ್ಯೆ 29 ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ.8 ಅಂತಾ ಮತ್ತು ನನ್ನ ಸಹಿಯನ್ನು ನಿ.ಪಿ.8(ಎ) ಅಂತಾ ಗುರ್ತಿಸಲಾಯಿತು. ಮೇಲೆ ಹೇಳಿದ ಲೋಕಾಯುಕ್ತರ ದಾಳಿ ಘಟನೆ ಮಧ್ಯಾಹ್ನ 4.00 ರಿಂದ ರಾತ್ರಿ 8.00ರ ತನಕ ನಿರಂತರ ನಡೆದಿದ್ದು ಇರುತ್ತದೆ. ಟ್ರ್ಯಾಪ್ ಕೆಲಸ ಆದ ಮೇಲೆ ಆರೋಪಿಗೆ ಮಾದರಿ ದಾಖಲೆ ಕೊಟ್ಟು ಸಹಿ ಪಡೆಯುತ್ತಾರೆ.

4) ದಿ.08.10.2013ರಂದು ಪುನಃ ಪೋಲೀಸರು ನನಗೆ ತಮ್ಮ ಠಾಣೆಗೆ ಕರೆಸಿರುತ್ತಾರೆ. ಘಟನೆ ನಡೆದ ಜಾಗೆಯ ಹಾಥ್ ನಕಾಶೆಯು ಗುನ್ನಾ ಸ್ಥಳದಲ್ಲಿ ತಯಾರಿಸಿದ್ದು ಅದನ್ನು ನನಗೂ ಕಳುಹಿಸಿದ್ದೂ ಇರುತ್ತದೆ. ಸದರಿ ನಕಾಶೆಯನ್ನು ಮಹದೇವಪ್ಪ ಇಂಜಿನಿಯರ್ ತಯಾರಿಸಿರುತ್ತಾರೆ. ಆ ನಕಾಶೆಯ ಮೇಲೆ ನಾನು ಸಹ ಸಹಿ ಮಾಡಿದ್ದೇನೆ. ಈಗ ನಾನು ಸದರಿ ನಕಾಶೆಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.9 ಅಂತಾ ಗುರ್ತಿಸಲಾಯಿತು. ನಾನು ಈಗ ಮು.ಮಾ.1ರಿಂದ ಮು.ಮಾ.10 ನೋಡಿ ಗುರ್ತಿಸಿದ್ದೇನೆ. ಮತ್ತು ಆರೋಪಿ ಪಡೆದ ಲಂಚದ ಹಣವನ್ನು ನೋಡಿದರೆ ಗುರ್ತಿಸುತ್ತೇನೆ.

ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ.ಎನ್.ಎಸ್. ವಕೀಲರಿಂದ
ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ದಾವಣಗೆರೆ.